ಬಂದು, ಇವರ ಮೇಲಚ್ಚಿಲುನಲ್ಲಿ ಬೀಡು ಬಿಡುವುದಿತ್ತು. ಆವಾಗಲೆಲ್ಲ ಅಲ್ಲಿ ಮಕ್ಕಳದ್ದೇ ಒಂದು ಲೋಕ, ಹೆಂಗಸರದ್ದೇ ಒಂದು ಲೋಕ. ಗುತ್ತಿನ ಒಡೆಯರಿಗೆ ಆ ಸಂದರ್ಭದಲ್ಲಿ ಮನೆಗೆ ಬಂದಿರುವ ಸಂಬಂಧಿಕರು ಯಾರೆಂಬುದು ಗೊತ್ತೇ ವಿನಹ ಅಲ್ಲಿ ಕುಣಿದು ಕುಪ್ಪಳಿಸುತ್ತಿರುವ ಮಕ್ಕಳು ಯಾರ್‍ಯಾರದ್ದೆಂದು ಗೊತ್ತು ಹಿಡಿಯಲಾಗದಷ್ಟು, ಗಜಿಬಿಜಿಯ ಮನೆಯಾಗುತ್ತಿತ್ತು ಅದು. ಆದ್ದರಿಂದಲೋ ಏನೋ ರಾಮಯ್ಯಾಳ್ವರು ದೂಮಣ್ಣ ಪರಾರಿಯವರ ಯಾವ ಮಗಳ ತಟ್ಟನೆ ಆಸ್ಪತ್ರೆಯಲ್ಲಿ ದಿಢೀರನೆ ಸ್ವಪ್ನಳನ್ನು ಕಂಡಾಗ ಇವಳು ಮಗಳು? ಇವಳು ಸುಖವೇಣಿಯ ಮಗಳೋ... ವಸುಧನ ಮಗಳೋ... ವಿಶಾಲನ ಮಗಳೋ?... ಅಥವಾ ಸುಮತಿಯ ಮಗಳೋ... ಎಂದು ಎಷ್ಟೇ ಯೋಚಿಸಿದ್ದರೂ ಅವರಿಗೆ ಯಾರ ಮಗಳು ಎಂಬುದು ನೆನಪಿಗೇ ಬಂದಿರಲಿಲ್ಲ. ಅವಳ್ಯಾರ ಮಗಳೆಂದು ನಂತರ ನೆನಪಿಸಿಕೊಟ್ಟವಳು ಮಗಳು ಕುಮುದಳೇ.

ಬಾಲ್ಯದಲ್ಲಿ ರಾಮಯ್ಯಾಳ್ವರ ಗುತ್ತಿನ ಅಂಗಳದಲ್ಲಿ ಜುಬಿಲಿ ಆಟ ಆಡುತ್ತಿದ್ದ, ಆ ಜಗಳಗಂಟಿ 'ಸೊಪ್ಪಿ'ಗೂ ಈಗ ಬೆಳೆದು ನಿಂತಿರುವ ಡಾ. ಸ್ವಪ್ನ ಹೆಗ್ಡೆಯ ಹೊರದೇಕಿಗೂ ಅಜಗಜಾಂತರ ವ್ಯತ್ಯಾಸ ಕಾಣಿಸುತ್ತಿದ್ದುದರಿಂದ ಕುಮುದಳಿಗೂ ಕೂಡ ತಕ್ಷಣ ಗುರುತಿಸಲು ಸಾಧ್ಯವಾಗಿರಲಿಲ್ಲ. ಸ್ವಪ್ನಳ ಅಪ್ಪನಿಗೆ ಗಟ್ಟದ ಮೇಲಕ್ಕೆ ವರ್ಗಾವಣೆಯಾದ ನಂತರದಲ್ಲಿ, ಅದರಲ್ಲೂ ಆಕೆ ಹೈಸ್ಕೂಲ್ ಮೆಟ್ಟಿಲು ಏರಿದ ನಂತರದಲ್ಲಿ ಸುಖಲತ ಬೇಸಿಗೆ ರಜೆಯಲ್ಲಿ ಮಕ್ಕಳನ್ನು ಊರಿಗೆ ಕರೆತರುವುದು... ಕುಟುಂಬದ ಲೇಸುಕಟ್ಟು, ಮದುವೆ ಮಸ್ರಿಗೆ, ಬಂಧು ಬಳಗದವರ ಮನೆಗೆ ಅವರನ್ನೆಲ್ಲ ಕಟ್ಟಿಕೊಂಡು ಹೋಗುವುದು... ಎಲ್ಲವೂ ನಿಂತು ಹೋಗಿತ್ತು. ಊರು ಮನೆಗಳಲ್ಲಿ ಅಪರೂಪದ ಕೂಡುಕಟ್ಟಿನ ಲೇಸು, ಭೂತದ ಕೋಲ, ನಾಗಾರಾಧನೆಯಂತಹ ದೈವಕಾರ್ಯಗಳಿದ್ದಲ್ಲಿ ಮಾತ್ರವೇ, ಆಕೆಯೊಬ್ಬಳೆ ಅದರಲ್ಲಿ ಪಾಲ್ಗೊಳ್ಳುತ್ತಿದ್ದಳೇ ವಿನಾ ಅಂತಹ ಕೂಡುಕಟ್ಟುಲೇಸುಗಳಿಗೆ ಮಕ್ಕಳನ್ನು ಕರೆತರುವುದು ಬಹಳ ಅಪರೂಪವೇ ಆಗಿತ್ತು. ಈ ಸ್ವಪ್ನ ಮೆಡಿಕಲ್ ಕಲಿಯಲು ಸೇರಿದ ನಂತರವಂತೂ ಊರಲ್ಲಿ ನಡೆವ ಯಾವುದೇ ಮದುವೆ ಸಮಾರಂಭಗಳಲ್ಲಿ ದೇವ ದೈವಕಾರ್ಯಗಳಲ್ಲಿ ಆಕೆ ಪಾಲ್ಗೊಳ್ಳುತ್ತಿದ್ದುದೇ ಅಪರೂಪವಾಗಿತ್ತು. ಸಣ್ಣಂದಿನಿಂದಲೂ ಮೈಲಿಗಲ್ಲನ್ನೂ ಕುಟ್ಟಿ ಮಾತನಾಡಿಸುವಷ್ಟು ಮಾತುಗಾತಿಯಾದ ಈ ಸೊಪ್ಪಿ ತನ್ನ ಎಂ.ಡಿ. ಮುಗಿಸಿದ ನಂತರದಲ್ಲಿ ತೀರ ಹತ್ತಿರದ ಸಂಬಂಧಿಕರಿಗೂ ಕಾಣಿಸಿದ್ದೇ ಕಮ್ಮಿ. ಆಕೆಯ ಮದುವೆಯೂ ಆಕೆಯ ಸೋದರಮಾವನ ಮುತುವರ್ಜಿಯಲ್ಲಿ ಮುಂಬೈನಲ್ಲೆ ನಡೆದದ್ದರಿಂದ ರಾಮಯ್ಯಾಳ್ವರಿಗೂ ಆ ಮದುವೆ ಸಮಾರಂಭದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದ ಕಾರಣ ನಂತರದಲ್ಲಿ ಆಕೆಯ ಯಾವುದೇ ವಿಷಯಗಳು ರಾಮಯ್ಯಾಳ್ವರಿಗೆ ಸಿಕ್ಕಿರಲಿಲ್ಲ, ಅವರಿಗೆ ತಲುಪಿರಲಿಲ್ಲ.

ಇದೀಗ... 'ಪಾರಿವಾಳ ಮತ್ತು ಇರುವೆಯ' ಕತೆಗೆ ಒಂದು ಚಂದದ ಕೊನೆ ಹೇಳಿ ಮುಗಿಸಿದವಳೇ ಸ್ವಪ್ನ ಹೆಗ್ಡೆ ಕುಮುದಳೊಬ್ಬಳನ್ನು ಬಿಟ್ಟು ಆ ವಾರ್ಡಿನಲ್ಲಿದ್ದ ಎಲ್ಲರನ್ನೂ ಹೊರಕಳುಹಿಸಿಬಿಟ್ಟಳು. ಸ್ವಪ್ನ, ಕುಮುದಳನ್ನು ಮಂಚದಲ್ಲಿ ತನ್ನ ಪಕ್ಕದಲ್ಲೇ ಕೂರಿಸಿಕೊಂಡು ಅವಳ ಬಲಕೈಯನ್ನು ತನ್ನೆರಡು ಕೈಯಲ್ಲಿ ಹಿಡಿದುಕೊಂಡು, ಅವಳೊಡನೆ ಆತ್ಮೀಯವಾಗಿ ಮಾತನಾಡುತ್ತ, ಕೌಶಿಕನ ಶಾಲೆ ಪಾಠ ಪ್ರವಚನ, ಆತನ ಆಸಕ್ತಿ, ಆಟ ಪಾಠ, ಆತನ ಇಷ್ಟದ ಬಗ್ಗೆ ಆಪ್ತವಾಗಿ ಎಲ್ಲ ಕೇಳಿಸಿಕೊಂಡು, 'ನೀನು ನೋಡ್ತಾ ಇರು ಕುಮ್ಮು... ನಿನ್ನ ಮಗನನ್ನು ಹೇಗೆ ನೆಟ್ಟಗೆ ಮಾಡ್ತೀನಿ' ಅಂತ ಹೇಳುತ್ತಲೇ... ಕುಮುದಳ ಒಳಗೆ ಆತ್ಮವಿಶ್ವಾಸದ ಹೊಳೆಯನ್ನೇ ಹರಿಸತೊಡಗಿ ಆಕೆಯನ್ನು ಹಗುರಗೊಳಿಸತೊಡಗಿದ್ದಳು.